**All India Radio: Bangalore**
**National Bulletin In Kannada**
**19.03.2025  19.35 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><><><>**

ಮುಖ್ಯಾಂಶಗಳು

1. ಸರ್ಕಾರದ ಹೂಡಿಕೆಗಳನ್ನು ರಚನಾತ್ಮಕ ರೀತಿಯಲ್ಲಿ ಬಳಸಲು ರಾಷ್ಟ್ರೀಯ ನೀತಿಯೊಂದರ ಜಾರಿ ಅಗತ್ಯ - ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್
2. ಕಡಿಮೆ ಮೌಲ್ಯದ ಯುಪಿಐ ವಹಿವಾಟು ಉತ್ತೇಜಿಸಲು ಪ್ರೋತ್ಸಾಹಕ ಯೋಜನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ
3. ಮುಂದಿನ ೨ ವರ್ಷಗಳಲ್ಲಿ ೧೦ ಸಾವಿರ ಜನೌಷಧಿ ಮಳಿಗೆ ತೆರೆಯಲು ಸರ್ಕಾರ ನಿರ್ಧಾರ - ಕೇಂದ್ರ ಸಚಿವ ಜೆ.ಪಿ. ನಡ್ಡಾ
4. ಸ್ವಿಸ್ ಓಪನ್ ಬ್ಯಾಡ್ಮಿಂಟನ್ : ಮಹಿಳಾ ಸಿಂಗಲ್ಸ್‌ನಲ್ಲಿ ಭಾರತದ ಅನುಪಮಾ ಉಪಾಧ್ಯಾಯ, ಈಶಾರಾಣಿ ಬರುವಾಹ್ ೧೬ರ ಸುತ್ತಿಗೆ ಪ್ರವೇಶ

<><><><>

ಸರ್ಕಾರದ ಎಲ್ಲ ಹೂಡಿಕೆಗಳನ್ನು ರಚನಾತ್ಮಕ ರೀತಿಯಲ್ಲಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಒಂದು ರಾಷ್ಟ್ರೀಯ ನೀತಿಯನ್ನು ಜಾರಿ ಮಾಡುವ ಅಗತ್ಯವಿದೆ ಎಂದು ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಹೇಳಿದ್ದಾರೆ. ರಾಜ್ಯಸಭೆಯ ಶೂನ್ಯವೇಳೆಯಲ್ಲಿ ಸಂಸದರನ್ನುದ್ದೇಶಿಸಿ ಮಾತನಾಡಿದ ಅವರು, ಸರ್ಕಾರದ ಎಲ್ಲಾ ಹೂಡಿಕೆಗಳನ್ನು ರಚನಾತ್ಮಕ ರೀತಿಯಲ್ಲಿ ಬಳಸಿಕೊಳ್ಳುವ ಜೊತೆಗೆ ಉಚಿತ ಕೊಡುಗೆಗಳ ಬಗ್ಗೆ ಅವಲೋಕಿಸುವಂತೆ ಸಂಸದರಿಗೆ ಸಲಹೆ ನೀಡಿದ್ದಾರೆ. ದೇಶದಲ್ಲಿ ಚುನಾವಣಾ ಪ್ರಕ್ರಿಯೆ ಚುನಾವಣಾ ಮನವೊಲಿಕೆಯಾಗಿ ಮಾರ್ಪಟ್ಟಿದೆ. ಉಚಿತ ಕೊಡುಗೆಗಳು ಚುನಾವಣಾ ನಂತರ ರಚನೆಯಾಗುವ ಸರ್ಕಾರದ ಮೇಲೆ ಹೆಚ್ಚು ಹೊರೆಯನ್ನು ಉಂಟು ಮಾಡುತ್ತದೆ ಎಂದ ಅವರು, ವಿವಿಧ ರಾಜ್ಯಗಳ ಶಾಸಕರ ವೇತನ ಹಾಗೂ ಪಿಂಚಣಿಗಳಲ್ಲಿ ಏಕರೂಪತೆ ತರುವ ಅಗತ್ಯವನ್ನು ಒತ್ತಿ ಹೇಳಿದರು.

<><><><>

ಕಡಿಮೆ ಮೌಲ್ಯದ ಭೀಮ್ ಯುಪಿಐ ವಹಿವಾಟುಗಳನ್ನು ಉತ್ತೇಜಿಸಲು ಪ್ರೋತ್ಸಾಹಕ ಯೋಜನೆಯನ್ನು ಇಂದು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ನವದೆಹಲಿಯಲ್ಲಿಂದು ಕೇಂದ್ರ ಸಚಿವ ಸಂಪುಟದ ನಿರ್ಧಾರಗಳ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ಅಂದಾಜು ಒಂದು ಸಾವಿರದ ೫೦೦

ಕೋಟಿ ರೂಪಾಯಿ ವೆಚ್ಚದಲ್ಲಿ ಈ ಯೋಜನೆ ಜಾರಿಯಾಗಲಿದೆ ಎಂದರು. ಇದರಿಂದ ಸಣ್ಣ ವ್ಯಾಪಾರಿಗಳ ಯಾವುದೇ ಹೆಚ್ಚುವರಿ ವೆಚ್ಚವಿಲ್ಲದೇ ಯುಪಿಐ ಸೇವೆಗಳನ್ನು ಪಡೆಯಬಹುದಾಗಿದೆ. ಇದರ ಜೊತೆಗೆ ಸಣ್ಣ ವ್ಯಾಪಾರಿಗಳಿಗೆ ೨ ಸಾವಿರವರೆಗಿನ ವಹಿವಾಟುಗಳಿಗೆ ಪ್ರತಿ ವಹಿವಾಟಿನ ಮೌಲ್ಯಕ್ಕೆ ಶೇಕಡ ೦.೧೫ ರಷ್ಟು ಪ್ರೋತ್ಸಾಹ ಧನ ನೀಡಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

**ಧ್ವನಿ : ಅಶ್ವಿನಿ ವೈಷ್ಣವ್ ( ೧೮ ಸೆಕೆಂಡ್‌ಗಳು)**

<><><>

ಅಸ್ಸಾಂನ ನಾಮ್‌ರೂಪ್‌ನಲ್ಲಿರುವ ಬ್ರಹ್ಮಪುತ್ರ ವ್ಯಾಲಿ ರಸಗೊಬ್ಬರ ನಿಗಮದ ಆವರಣದಲ್ಲಿ ಹೊಸ ಬ್ರೌನ್ ಫೀಲ್ಡ್ ಅಮೋನಿಯಾ ಯೂರಿಯಾ ಸಂಕೀರ್ಣ ರಸಗೊಬ್ಬರ ಘಟಕ ಸ್ಥಾಪನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಈ ಕುರಿತು ಮಾಹಿತಿ ನೀಡಿರುವ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, ಈ ಯೋಜನೆಯಿಂದಾಗಿ ದೇಶೀಯ ಯೂರಿಯಾ ಉತ್ಪಾದನಾ ಸಾಮರ್ಥ್ಯ ಹೆಚ್ಚಳವಾಗಲಿದ್ದು, ರಸಗೊಬ್ಬರಗಳ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸುತ್ತಿದೆ. ಈ ಘಟಕ ವಾರ್ಷಿಕ ೧೨.೭ ಲಕ್ಷ ಮೆಟ್ರಿಕ್ ಟನ್ ಯೂರಿಯಾ ಉತ್ಪಾದನಾ ಸಾಮರ್ಥ್ಯ ಹೊಂದಿರಲಿದೆ ಎಂದಿದ್ದಾರೆ. ಮಹಾರಾಷ್ಟ್ರದ ಜೆಎನ್‌ಪಿಎ ಬಂದರಿನಿಂದ ಚೌಕ್‌ವರೆಗೆ ಷಟ್‌ಪಥ ಹಸಿರು ಹೆದ್ದಾರಿ ನಿರ್ಮಾಣಕ್ಕೆ ಕೇಂದ್ರ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಅನುಮೋದನೆ ನೀಡಿದೆ. ಈ ಯೋಜನೆಯನ್ನು ನಿರ್ಮಾಣ, ನಿರ್ವಹಣೆ ಮತ್ತು ವರ್ಗಾವಣೆ ವಿಧಾನದಡಿ ಒಟ್ಟು ೪ ಸಾವಿರದ ೫೦೦ ಕೋಟಿ ರೂಪಾಯಿಗಳ ಬಂಡವಾಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದು.

<><><>

ಜಾನುವಾರು ವಲಯದ ಬೆಳವಣಿಗೆಗೆ ಪೂರಕವಾಗುವ ನಿಟ್ಟಿನಲ್ಲಿ ಪರಿಷ್ಕೃತ ರಾಷ್ಟ್ರೀಯ ಗೋಕುಲ್ ಯೋಜನೆಗೆ ಸರ್ಕಾರ ಅನುಮೋದನೆ ನೀಡಿದೆ. ಇದರ ಜೊತೆಗೆ ಡೈರಿ ಬೆಳವಣಿಗೆ ಕುರಿತ ಪರಿಷ್ಕೃತ ರಾಷ್ಟ್ರೀಯ ಯೋಜನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಈ ಉಪಕ್ರಮ ಡೈರಿ ಮೂಲಸೌಕರ್ಯವನ್ನು ಆಧುನೀಕರಿಸುವ ಮತ್ತು ವಿಸ್ತರಿಸುವುದರ ಮೇಲೆ ಕೇಂದ್ರೀಕರಿಸಿದೆ.

<><><>

ದೇಶಾದ್ಯಂತ ಪ್ರಸ್ತುತ ೧೫ ಸಾವಿರ ಜನೌಷಧಿ ಮಳಿಗೆಗಳು ಕಾರ್ಯ ನಿರ್ವಹಿಸುತ್ತಿದ್ದು, ಮುಂದಿನ ೨ ವರ್ಷಗಳಲ್ಲಿ ಇನ್ನು ೧೦ ಸಾವಿರ ಮಳಿಗೆಗಳನ್ನು ತೆರೆಯಲು ಸರ್ಕಾರ ನಿರ್ಧರಿಸಿದೆ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಹೇಳಿದ್ದಾರೆ. ರಾಜ್ಯಸಭೆಯಲ್ಲಿಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಕಾರ್ಯ ವೈಖರಿ ಕುರಿತ ಚರ್ಚೆಯಲ್ಲಿ ಪಾಲ್ಗೊಂಡು ಉತ್ತರಿಸಿದ ಅವರು, ಈ ಮಳಿಗೆಗಳಿಂದಾಗಿ ಸಾರ್ವಜನಿಕರಿಗೆ ಇದುವರೆಗೆ ೩೦ ಸಾವಿರ ಕೋಟಿ ರೂಪಾಯಿ

ಉಳಿತಾಯವಾಗಿದೆ. ೨೦೧೭ರಲ್ಲಿ ಪರಿಚಯಿಸಲಾದ ರಾಷ್ಟ್ರೀಯ ಆರೋಗ್ಯ ನೀತಿ ತಡೆಗಟ್ಟುವಿಕೆ ಮೇಲೆ ಕೇಂದ್ರೀಕರಿಸುವ ಒಂದು ಸಮಗ್ರ ನೀತಿಯಾಗಿದ್ದು, ಹಿಂದಿನ ಆರೋಗ್ಯ ನೀತಿಗಳು ಕೇವಲ ಗುಣಪಡಿಸುವುದರ ಮೇಲೆ ಕೇಂದ್ರೀಕರಿಸಿದ್ದವು ಎಂದರು. ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಜೆಡಿಎಸ್ ನಾಯಕ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಗ್ರಾಮೀಣ ಭಾಗದ ಆಸ್ಪತ್ರೆಗಳ ಮೇಲೆ ಹೆಚ್ಚು ಗಮನ ಹರಿಸಬೇಕು. ಗರ್ಭಕಂಠ ಕ್ಯಾನ್ಸರ್‌ನಿಂದ ರಕ್ಷಿಸಲು ಪ್ರೌಢಶಾಲಾ ವಿದ್ಯಾರ್ಥಿನಿಯರ ಲಸಿಕೀಕರಣಕ್ಕೆ ಕೇಂದ್ರ ಸರ್ಕಾರ ಕ್ರಮ ವಹಿಸಬೇಕು ಎಂದರು.

<><><><>

ಆನ್‌ಲೈನ್ ಜೂಜು ಮತ್ತು ಬೆಟ್ಟಿಂಗ್ ಚಟುವಟಿಕೆಗಳ ನಿಯಂತ್ರಣದಲ್ಲಿ ಗಮನಾರ್ಹ ಸುಧಾರಣೆ ಸಾಧಿಸಲಾಗಿದೆ ಎಂದು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಲೋಕಸಭೆಯಲ್ಲಿಂದು ಪೂರಕ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಕಳೆದ ಒಂದು ವರ್ಷದಲ್ಲಿ ಒಂದು ಸಾವಿರದ ೬೭ ಬೆಟ್ಟಿಂಗ್ ಹಾಗೂ ಜೂಜು ಜಾಲತಾಣಗಳನ್ನು ನಿಷೇಧಿಸಲಾಗಿದೆ. ಇಂತಹ ಚಟುವಟಿಕೆಗಳನ್ನು ಎದುರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸೇರಿದಂತೆ ಎಲ್ಲ ಸೈಬರ್ ಅಪರಾಧ ಸಂಬಂಧಿತ ಸಂಸ್ಥೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು ಎಂದರು.

<><><><>

ಜನರು ರಾಷ್ಟ್ರ ಮೊದಲು ಎಂಬ ಮನಸ್ಥಿತಿಯೊಂದಿಗೆ ಒಗ್ಗಟ್ಟಿನಿಂದಿದ್ದು, ಪ್ರಾಮಾಣಿಕತೆಯಿಂದ ಕರ್ತವ್ಯಗಳನ್ನು ನಿರ್ವಹಿಸಬೇಕು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕರೆ ನೀಡಿದ್ದಾರೆ. ನವದೆಹಲಿಯಲ್ಲಿಂದು ನಡೆದ ಐದನೇ ಆವೃತ್ತಿಯ ಮೇಜರ್ ಬಾಬ್ ಖಾಥಿಂಗ್ ಸ್ಮಾರಕ ಕಾರ್ಯಕ್ರಮವನ್ನುದ್ದೇಶಿಸಿ ಅವರು ಮಾತನಾಡಿದರು. ಮೇಜರ್ ಖಾಥಿಂಗ್ ಅವರನ್ನು ಭಾರತದ ಮಹಾನ್ ಪುತ್ರ ಎಂದು ಬಣ್ಣಿಸಿದ ಅವರು, ಯುದ್ಧಭೂಮಿಯಲ್ಲಿ ಅವರ ಶೌರ್ಯ ಮತ್ತು ರಾಜತಾಂತ್ರಿಕ ಕ್ಷೇತ್ರದಲ್ಲಿ ಅವರ ಕೌಶಲ್ಯ ಅವಿಸ್ಮರಣೀಯ. ಮೇಜರ್ ಖಾಥಿಂಗ್ ಅವರ ಆಡಳಿತಾತ್ಮಕ ಪ್ರಾವೀಣ್ಯತೆ, ವಿಶೇಷವಾಗಿ ಸಶಸ್ತ್ರ ಸೀಮಾ ಬಲ ಪಡೆ ಮತ್ತು ನಾಗಾಲ್ಯಾಂಡ್ ಸಶಸ್ತ್ರ ಪೊಲೀಸ್ ಪಡೆಯ ರಚನೆ ಮತ್ತು ಇತರ ಸುಧಾರಣೆಗಳಲ್ಲಿ ಅವರು ಅನನ್ಯ ಕೊಡುಗೆ ನೀಡಿದ್ದಾರೆ ಎಂದರು.

<><><><>

ಲೋಕಸಭೆಯಲ್ಲಿಂದು ೨೦೨೫-೨೬ರ ಜಲಶಕ್ತಿ ಸಚಿವಾಲಯದ ಅನುದಾನಗಳ ಬೇಡಿಕೆ ಕುರಿತು ಚರ್ಚೆ ಕೈಗೆತ್ತಿಕೊಳ್ಳಲಾಯಿತು. ಚರ್ಚೆ ಆರಂಭಿಸಿದ ಬಿಜೆಪಿಯ ಜಗದಾಂಬಿಕಾ ಪಾಲ್ ಕೇಂದ್ರ ಸರ್ಕಾರ ೨೦೨೫-೨೬ರ ಸಾಲಿಗೆ ೯೯ ಸಾವಿರದ ೫೦೦ ಕೋಟಿ ರೂಪಾಯಿಯ ಆಯವ್ಯಯವನ್ನು ಜಲಶಕ್ತಿ ಸಚಿವಾಲಯಕ್ಕೆ ನೀಡಿದೆ ಎಂದು ತಿಳಿಸಿದರು.

<><><>

ಪಂಜಾಬ್‌ನ ರೈತರು ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಿಯೋಗಗಳ ನಡುವಿನ ೩ನೇ ಸುತ್ತಿನ ಮಾತುಕತೆ ಇಂದು ಚಂಡಿಗಢದಲ್ಲಿ ಮುಕ್ತಾಯವಾಗಿದೆ. ಮುಂದಿನ ಸಭೆ ಮೇ ೪ ರಂದು ನಿಗದಿಯಾಗಿದೆ. ಸಭೆ ಕುರಿತು ಮಾತನಾಡಿರುವ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌವ್ಹಾಣ್, ಸರ್ಕಾರಕ್ಕೆ ರೈತರ ಹಿತಾಸಕ್ತಿ ಮಹತ್ವದ್ದಾಗಿದೆ. ರೈತರ ಕಲ್ಯಾಣಕ್ಕಾಗಿ ಸಮಸ್ಯೆಗಳನ್ನು ಪರಿಹರಿಸಲು ನಿರಂತರವಾಗಿ ನೀತಿಗಳನ್ನು ಪರಿಷ್ಕರಿಸುತ್ತಿದೆ ಎಂದು ಹೇಳಿದರು.

<><><>

ಭಾರತ ೨೦೩೫ ರ ವೇಳೆಗೆ "ಭಾರತ ಅಂತರಿಕ್ಷ ನಿಲ್ದಾಣ" ಎಂಬ ತನ್ನದೇ ಆದ ಬಾಹ್ಯಾಕಾಶ ಕೇಂದ್ರವನ್ನು ಹೊಂದಲು ಯೋಚಿಸಿದ್ದು, ಈ ಯೋಜನೆ ಯಶಸ್ವಿಯಾದರೆ ೨೦೪೦ ರ ವೇಳೆಗೆ ಭಾರತೀಯ ಗಗನಯಾತ್ರಿ ಚಂದ್ರನ ಮೇಲೆ ಕಾಲಿಡಲಿದ್ದಾರೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವ ಡಾ. ಜಿತೇಂದ್ರ ಸಿಂಗ್ ಹೇಳಿದ್ದಾರೆ. ಲೋಕಸಭೆಯಲ್ಲಿ ಇಂದು ಪೂರಕಗಳಿಗೆ ಉತ್ತರಿಸಿದ ಅವರು, ಚಂದ್ರಯಾನ -೪ ಅನ್ನು ಎರಡು ನೌಕೆಗಳ ಮೂಲಕ ಉಡಾವಣೆ ಮಾಡಲಾಗುವುದು ಮತ್ತು ಅದು ಐದು ಘಟಕಗಳನ್ನು ಹೊಂದಿರಲಿದೆ. ಈ ವರ್ಷದ ಅಂತ್ಯದ ವೇಳೆಗೆ ಮಹಿಳಾ ರೋಬೋಟ್‌ನೊಂದಿಗೆ ಗಗನಯಾನದ ಪರೀಕ್ಷಾರ್ಥ ಹಾರಾಟವನ್ನು ಪ್ರಾರಂಭಿಸಲಾಗುವುದು ಎಂದು ತಿಳಿಸಿದರು. ಸುನೀತಾ ವಿಲಿಯಮ್ಸ್ ಸುರಕ್ಷಿತವಾಗಿ ಭೂಮಿಗೆ ಮರಳಿದ್ದು, ಹೆಮ್ಮೆಯ ವಿಚಾರದ ಜೊತೆಗೆ, ನೆಮ್ಮದಿಯ ಕ್ಷಣ ಎಂದು ಸಚಿವ ಡಾ. ಜಿತೇಂದ್ರ ಸಿಂಗ್ ಸಂತಸ ವ್ಯಕ್ತಪಡಿಸಿದರು.

<><><>

ರಾಷ್ಟ್ರಪತಿ ಭವನದ ಅಮೃತ್ ಉದ್ಯಾನವನದಲ್ಲಿ ನಾಳೆ ನಡೆಯಲಿರುವ ಉದ್ಯಮ ಉತ್ಸವದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಗವಹಿಸಲಿದ್ದಾರೆ. ದೇಶದ ವೈವಿಧ್ಯಮಯ ಪರಂಪರೆಯನ್ನು ಸಾರ್ವಜನಿಕರಿಗೆ ತಲುಪಿಸುವ ಮತ್ತು ತಲುಪಿಸುವ ಮೂಲಕ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಬಲೀಕರಣ ಮತ್ತು ಪ್ರೋತ್ಸಾಹಕ್ಕೆ ಕೇಂದ್ರ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವಾಲಯ ಆಯೋಜಿಸುತ್ತಿರುವ ಈ ಕಾರ್ಯಕ್ರಮ ಇದೇ ೩೦ರವರೆಗೆ ನಡೆಯಲಿದೆ. ಕರಕುಶಲ ವಸ್ತುಗಳು, ಕೃಷಿ ಆಧಾರಿತ ಉತ್ಪನ್ನಗಳು ಸೇರಿದಂತೆ ವೈವಿಧ್ಯಮಯ ಉತ್ಪನ್ನಗಳನ್ನು ಈ ಮೇಳದಲ್ಲಿ ಪ್ರದರ್ಶನಕ್ಕೆ ಇಡಲಾಗುತ್ತಿದೆ. ಕಾರ್ಯಕ್ರಮದ ಭಾಗವಾಗಿ ಹುನರ್ ಸಂಗೀತ್, ನುಕ್ಕಡ್ ನಾಟಕ್, ರಾಜಸ್ಥಾನಿ ಬೊಂಬೆ ನಿರ್ಮಾಣದ ಪ್ರದರ್ಶನಗಳು ನಡೆಯಲಿವೆ. ನಾಳೆಯಿಂದ ಆರಂಭವಾಗುತ್ತಿರುವ ಈ ಉದ್ಯಮ ಉತ್ಸವಕ್ಕೆ ಬೆಳಗ್ಗೆ ೧೦ ಗಂಟೆಯಿಂದ ಸಂಜೆ ೮ ಗಂಟೆಯವರೆಗೆ ಸಾರ್ವಜನಿಕರಿಗೆ ಮುಕ್ತ ಪ್ರವೇಶವಿರಲಿದೆ.

<><><>

ಸ್ವಿಟ್ಜರ್‌ಲ್ಯಾಂಡ್‌ನ ಬಾಸಲ್‌ನಲ್ಲಿ ನಡೆಯುತ್ತಿರುವ ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದ ೩೨ರ ಸುತ್ತಿನ ಪಂದ್ಯದಲ್ಲಿಂದು ಭಾರತದ ಅನುಪಮಾ ಉಪಾಧ್ಯಾಯ ಭಾರತದವರೇ ಆದ ಅನ್ಮೋಲ್ ಖಾರ್ಬ್ ಅವರ ವಿರುದ್ಧ ೨೧-೧೪, ೨೧-೧೩ ಸೆಟ್‌ಗಳ ಅಂತರದಲ್ಲಿ ಗೆಲುವು ಸಾಧಿಸಿ ೧೬ರ ಸುತ್ತಿಗೆ ಪ್ರವೇಶ ಪಡೆದಿದ್ದಾರೆ. ಮಹಿಳಾ ಸಿಂಗಲ್ಸ್‌ನ ೩೨ರ ಸುತ್ತಿನ ಮತ್ತೊಂದು ಪಂದ್ಯದಲ್ಲಿ ಈಶಾರಾಣಿ ಬರುವಾಹ್ ಆಕರ್ಷಿ ಕಶ್ಯಪ್ ವಿರುದ್ಧ ೧೮-೨೧, ೨೧-೧೭, ೨೨-೨೦ ಸೆಟ್‌ಗಳ ಅಂತರದಲ್ಲಿ ಗೆಲುವು ಸಾಧಿಸಿ ಮುಂದಿನ ಹಂತ ಪ್ರವೇಶಿಸಿದ್ದಾರೆ.

<><><><>

ಶಿಲ್ಲಾಂಗ್‌ನಲ್ಲಿಂದು ನಡೆಯಲಿರುವ ಅಂತಾರಾಷ್ಟ್ರೀಯ ಸೌಹಾರ್ದ ಫುಟ್ಬಾಲ್ ಪಂದ್ಯದಲ್ಲಿ ಭಾರತ ಹಾಗೂ ಮಾಲ್ದೀವ್ಸ್ ತಂಡಗಳು ಮುಖಾಮುಖಿಯಾಗಿವೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>